**ಅ. ದಾ. ಸಂ. : 324/ 2015**
**ಡಿ.ಡಬ್ಲ್ಯೂ : 01**

ದಿನಾಂಕ : **22-12-2021** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ವಾದಿಯ ಪರ ಶ್ರೀ. ಟಿ.ಕೆ.ಹೆಚ್. ವಕೀಲರಿಂದ :-**

ದಾವೆಯನ್ನು ಯಾರು, ಯಾರ ವಿರುದ್ಧ ಮತ್ತು ಯಾವ ಪರಿಹಾರ ಕೋರಿ ಹೂಡಿದ್ದಾರೆ ಎಂದು ನಾನು ತಿಳಿದುಕೊಂಡಿರುತ್ತೇನೆ. ದಾವೆ ಹೂಡಿರುವವರು ಯಾರು ಎಂದು ನನಗೆ ಗೊತ್ತಿಲ್ಲ, ಸಾಕ್ಷಿ ಮುಂದುವರೆದು ನನಗೆ ಪರಿಚಯವಿಲ್ಲ. ಸದರಿಯವರು ಯಾರು ಎಂದು ನಾನು ತಿಳಿದುಕೊಂಡಿಲ್ಲ. ನಾನು ದಾವ ಸ್ವತ್ತನ್ನು ಖರೀದಿ ಮಾಡಿದ್ದೇವೆ ಎಂಬ ವಿಚಾರದಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಪ್ರತಿವಾದಿ 6 ರವರ ವಿರುದ್ದ ದಾವೆ ಹೂಡಿರುವ ವಿಚಾರ ನನಗೆ ಗೊತ್ತಿದೆ, ಸಾಕ್ಷಿ ಮುಂದುವರೆದು ಸದರಿಯವರು ನನ್ನ ಹೆಂಡತಿಯಾಗಿರುತ್ತಾರೆ. ಪ್ರತಿವಾದಿ 6 ರವರು ಶಿಕ್ಷಕರಾಗಿರುತ್ತಾರೆ. ಸದರಿಯವರು ಆರೋಗ್ಯವಾಗಿದ್ದು, ಓಡಾಡುತ್ತಾರೆ ಎಂದರೆ ಸರಿ. ಸದರಿಯವರು ನ್ಯಾಯಾಲಯಕ್ಕೆ ಬಂದು ವಿಚಾರಣೆ ನೀಡಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸದರಿಯವರು ಶಿಕ್ಷಕರಾಗಿದ್ದು, ನನ್ನ ಮಕ್ಕಳ ಪೋಷಣೆ ಹಾಗೂ ನನ್ನ ತಾಯಿ 85 ವರ್ಷ ವಯಸ್ಸಿನ ವೃದ್ದೆಯ ಪೋಷಣೆ ಮಾಡಬೇಕಾಗಿರುತ್ತದೆ ಎನ್ನುತ್ತಾರೆ.

2. ವಾದಿಗಳು ಪ್ರತಿವಾದಿ 1 ರಿಂದ 5 ರವರ ನಡುವೆ ಯಾವ ಸಂಬಂಧ ಹೊಂದಿದ್ದಾರೆ ಎಂದು ನಾನು ತಿಳಿದುಕೊಂಡಿದ್ದೇನೆ, ಸಾಕ್ಷಿ ಮುಂದುವರೆದು ಸದರಿಯು ಸುಳ್ಳಾಗಿರುತ್ತದೆ ಎನ್ನುತ್ತಾರೆ. ಪ್ರತಿವಾದಿ 1 ರವರು ನನಗೆ ಗೊತ್ತಿಲ್ಲ. ಸದರಿ ಪ್ರತಿವಾದಿ 1 ರವರು ಸಿದ್ದಗಂಗಪ್ಪನವರ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಿದ್ದಗಂಗಪ್ಪ ಮತ್ತು ಪ್ರತಿವಾದಿ 1 ರವರಿಗೆ ಸಿದ್ದಲಿಂಗಪ್ಪ ಎಂಬ ಮಗನಿದ್ದನು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಿದ್ದಲಿಂಗಪ್ಪನವರು ಮರಣ ಹೊಂದಿದ್ದು, ಅವರ ಹೆಂಡತಿ 2 ನೇ ಪ್ರತಿವಾದಿ ರುದ್ರಮ್ಮ ಎಂದರೆ ನನಗೆ ಗೊತ್ತಿಲ್ಲ. ಸದರಿ ಸಿದ್ದಗಂಗಪ್ಪನವರ ತಾಯಿಯ ಹೆಸರು ಪುಟ್ಟಮ್ಮ ಎಂದರೆ ಸರಿ, ಸದರಿಯವರು ನನಗೆ ಗೊತ್ತು. ಸದರಿ ಪುಟ್ಟಮ್ಮನವರ ತಂದೆ ಸಿದ್ದನಂಜಪ್ಪ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಸಿದ್ದನಂಜಪ್ಪನವರು

ನನಗೆ ಗೊತ್ತು, ಆದರೆ ಪುಟ್ಟಮ್ಮನವರ ತಂದೆ ಎಂಬುದು ಸುಳ್ಳು ಎನ್ನುತ್ತಾರೆ, ಸಾಕ್ಷಿ ಮುಂದಮರೆದು ಸಿದ್ದನಂಜಪ್ಪನವರ ಪುಟ್ಟಮ್ಮನವರ ಗಂಡ ಎಂದು ನನಗೆ ಗೊತ್ತು ಎನ್ನುತ್ತಾರೆ.

3. ಸದರಿ ಪುಟ್ಟಮ್ಮನವರು ಸಿದ್ದನಂಜಪ್ಪನವರ ಮೊದಲ ಹೆಂಡತಿ ಎಂದರೆ ಸರಿ. ಸದರಿಯವರ ಎರಡನೇ ಹೆಂಡತಿ ಸಿದ್ದಲಿಂಗಮ್ಮ ಎಂದರೆ ಸರಿ. ಸದರಿ ಸಿದ್ದಲಿಂಗಮ್ಮನವರ ವಾದಿಗಳು ಮತ್ತು ಪ್ರತಿವಾದಿ 4 ಎಂದರೆ ಸಾಕ್ಷಿ ಪ್ರತಿವಾದಿ 4 ಮಾತ್ರ ನನಗೆ ಗೊತ್ತು ಎನ್ನುತ್ತಾರೆ. ವಾದಿಗಳು ಪ್ರತಿವಾದಿ 4 ರವರ ಸಹೋದರಿಯರು ಎಂದರೆ ಸುಳ್ಳು. ವಾದಿಗಳು ವಂಶವೃಕ್ಷ ಹಾಜರು ಪಡಿಸಿದ್ದಾರೆ ಎಂದು ನನಗೆ ಗೊತ್ತು. ಸದರಿ ವಂಶವೃಕ್ಷದಲ್ಲಿ ವಾದಿಗಳನ್ನು ನಮೂದಿಸಲಾಗಿದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಸದರಿಯು ಸುಳ್ಳಾಗಿದೆ ಎನ್ನುತ್ತಾರೆ. ವಾದಿಗಳು ಯಾರ ಮಕ್ಕಳು ಎಂದು ನಾನು ವಿಚಾರಣೆ ಮಾಡಿ ತಿಳಿದುಕೊಂಡಿರುವುದಿಲ್ಲ. ನಾನು ವಾದಿಗಳ ಸಂಬಂಧವನ್ನು ಪ್ರತಿವಾದಿ 4 ರವರೊಂದಿಗೆ ನಿರಾಕರಿಸುತ್ತಿರುವುದು ಸುಳ್ಳಾಗಿದೆ ಎಂದರೆ ಸರಿಯಲ್ಲ. ವಾದಿಗಳಿಗೆ ಭಾಗಾಂಶ ಇತ್ಯಾರ್ಥವಾಗುತ್ತದೆ ಎಂಬ ಕಾರಣಕ್ಕಾಗಿ ಪ್ರತಿವಾದಿ 4 ರವರೊಂದಿಗಿನ ವಾದಿಗಳ ಸಂಬಂಧವನ್ನು ನಿರಾಕರಿಸುತ್ತಿದ್ದೇನೆ ಎಂದರೆ ಸರಿಯಲ್ಲ.

4. ಸಿದ್ದನಂಜಪ್ಪನವರು ದಿಃ 23-06-2007 ರಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ. ಸದರಿಯವರ ಮರಣ ನಂತರ ವಾದಿಗಳು ಸಿದ್ದನಂಜಪ್ಪನವರ ವಾರಸುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಿದ್ದನಂಜಯ್ಯನವರು ಕೆಟ್ಟ ಚಟವನ್ನು ಹೊಂದಿದ್ದು, ಕುಟುಂಬದ ಜವಾಬ್ದಾರಿಯನ್ನು ಹೊಂದಿರಲಿಲ್ಲ ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ತಾವರೆಕೆರೆ ಗ್ರಾಮದಲ್ಲಿ ಸದರಿಯವರಿಗೆ ಒಳ್ಳೆಯ ಹೆಸರು ಇದೆ ಎನ್ನುತ್ತಾರೆ. ನಮಗೂ ಮತ್ತು ವಾದಿಗಳಿಗೂ ದಾವ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿ ಯಾವುದೇ ರಕ್ತಸಂಬಂಧವಿರಲಿಲ್ಲ ಎಂದರೆ ಸರಿ.

5. ನನ್ನ ಹೆಂಡತಿಯು ದಾವ ಸ್ವತ್ತನ್ನು ಖರೀದಿಸಿರುವುದರಿಂದ ಪಕ್ಷಗಾರರನ್ನಾಗಿ

ಮಾಡಲಾಗಿದೆ. ದಿಃ 22-08-2005 ರಲ್ಲಿ ಸಿದ್ದನಂಜಯ್ಯನವರಿಂದ ಪ್ರತಿವಾದಿ 6 ರವರು ದಾವ ಸ್ವತ್ತನ್ನು ಖರೀದಿಸಿರುತ್ತಾರೆ. ಸದರಿ ಸ್ವತ್ತು ಸರ್ವೆ ನಂಬರ್-178/4 ಎ ರಲ್ಲಿ ಹದಿನೈದುವರೆ ಗುಂಟೆ ವಿಸ್ತೀರ್ಣ ಹೊಂದಿದೆ. ಖರೀದಿಯ ವೇಳೆಯಲ್ಲಿ ನಾನು ಹಾಜರಿದ್ದೆ. ಸದರಿ ಕ್ರಯಪತ್ರದಲ್ಲಿ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಸದರಿ ಕ್ರಯಪತ್ರದಲ್ಲಿ ಸಿದ್ದನಂಜಯ್ಯನವರ ಮಕ್ಕಳಾದ ವಾದಿಗಳು ಪಕ್ಷಗಾರರಾಗಿರುವುದಿಲ್ಲ ಎಂದರೆ ಸಾಕ್ಷಿ ಸದರಿ ವಾದಿಗಳು ಸಿದ್ದನಂಜಯ್ಯನವರ ಮಕ್ಕಳಲ್ಲ ಎನ್ನುತ್ತಾರೆ. ನಾನು ದುರುದ್ದೇಶದಿಂದ ವಾದಿಗಳನ್ನು ಸಿದ್ದನಂಜಯ್ಯನವರ ಮಕ್ಕಳುಗಳಲ್ಲ ಎಂದು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ನಾನು ಕ್ರಯಪತ್ರದ ವೇಳೆಯಲ್ಲಿ ಹಾಜರಿರದ್ದರೂ ಹಾಜರಿದ್ದೆ ಎಂದು ಸುಳ್ಳು ನುಡಿಯುತ್ತಿದ್ದು, ಪ್ರತಿವಾದಿ 6 ರವರಿಗೆ ವಾದಿಗಳು ಸಿದ್ದನಂಜಯ್ಯನವರ ಮಕ್ಕಳು ಎಂದು ಗೊತ್ತಿರುವುದರಿಂದ ಅವರು ನ್ಯಾಯಾಲಯಕ್ಕೆ ಹಾಜರಾಗದೇ ನಾನು ಹಾಜರಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವ ಸ್ವತ್ತು ಸಿದ್ದನಂಜಪ್ಪ ಮತ್ತು ಆತನ ಇಬ್ಬರು ಹೆಂಡತಿಯರ ಮಕ್ಕಳ ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ಕೇವಲ ಸಿದ್ದನಂಜಪ್ಪನವರ ಆಸ್ತಿ ಎನ್ನುತ್ತಾರೆ. ದಾವ ಸ್ವತ್ತು ಸಿದ್ದನಂಜಪ್ಪನವರ ಸ್ವಯಾರ್ಜಿತ ಆಸ್ತಿಯಾಗಿದೆ ಎನ್ನುತ್ತಾರೆ. ದಾವ ಸ್ವತ್ತನ್ನು ಸಿದ್ದನಂಜಪ್ಪನವರು ಖರೀದಿ ಮಾಡಿದ್ದರು. ಸದರಿ ಕ್ರಯಪತ್ರ ಯಾರಿಂದ ಯಾವ ದಿನಾಂಕದಂದು ಆಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ನಿಡಿ-02 ರ ಕ್ರಯಪತ್ರದಲ್ಲಿಯೂ ಕೂಡ ಸಿದ್ದನಂಜಪ್ಪನವರಿಗೆ ಯಾವ ದಿನಾಂಕದ ಕ್ರಯಪತ್ರದ ಅಡಿಯಲ್ಲಿ ಸ್ವತ್ತು ಬಂದಿದೆ ಎಂದು ನಮೂದಿಸಿರುವುದಿಲ್ಲ. ದಾವ ಸ್ವತ್ತು ಸಿದ್ದನಂಜಪ್ಪನವರ ಪಿತ್ರಾರ್ಜಿತ ಸ್ವತ್ತು ಆಗಿದ್ದು, ಸ್ವಯಾರ್ಜಿತ ಸ್ವತ್ತು ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರಿಗೆ ಯಾವುದೇ ಕ್ರಯಪತ್ರವಾಗಿಲ್ಲ ಮತ್ತು ನಾನು ಕ್ರಯಪತ್ರ ನೋಡಿಲ್ಲ ಎಂದರೆ ಸರಿಯಲ್ಲ, ಸದರಿ ಕ್ರಯಪತ್ರ ನಾನು ನೋಡಿದ್ದಲ್ಲಿ, ಆ ವಿಚಾರವಾಗಿ ನಿಡಿ-2 ರಲ್ಲಿ ನಮೂದಿಸುತ್ತಿದ್ದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಮಾಹಿತಿ ಇರಲಿಲ್ಲ ಎನ್ನುತ್ತಾರೆ.

7. ಪ್ರತಿವಾದಿ 6 ರವರಿಗೆ ದಾವೆ ಹೂಡಿದ ನಂತರ ವಾದಿಗಳಿಗೆ ದಾವ ಸ್ವತ್ತಿನಲ್ಲಿ ಹಕ್ಕು ಇರುವ ವಿಚಾರ ತಿಳಿದು, ನಾನು ಇನ್ನು ಮುಂದೆ ದಾವ ಸ್ವತ್ತಿಗೆ ತಂಟೆ ಮಾಡುವುದಿಲ್ಲವೆಂದು ಹೇಳಿದ್ದರು ಎಂದರೆ ಸರಿಯಲ್ಲ. ಸಿದ್ದನಂಜಪ್ಪನವರ ಹೆಸರಿನಲ್ಲಿರುವ ಮ್ಯುಟೇಷನ್ ಮತ್ತು ಪಹಣಿಯನ್ನು ಹಾಜರು ಪಡಿಸಿರುತ್ತೇನೆ. ಸದರಿ ದಾಖಲಾತಿಯನ್ನು ಹಾಜರು ಪಡಿಸದೇ ಇದ್ದರು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಾದಿಯ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ. ಸಿ. ಜ. ಮತ್ತು ಜೆ. ಎಂ. ಎಫ್? ಸಿ. ಮಾಗಡಿ.**